ಭಾನುವಾರ
18/05/2025

ಬದುಕು ಪುರಾಣ



ನಾ ಕಾರಂತ ಪೆರಾಜೆ

THE RURAL MIRROR.com Constructive Media

WWW.THERURALMIRROR.COM

ದ ರೂರಲ್ ಮಿರರ್.ಕಾಂ

Constructive Media

# ವಿಶ್ವದ ಮೊದಲ ಪತ್ರಕರ್ತ!

ನಾರದ ನಿತ್ಯ ಸಂಚಾರಿ. 'ಧರ್ಮ'ದ ಕಾವಲುಗಾರ. ಲೋಕದ ಆಗುಹೋಗುಗಳ ಸಂವಹನಕಾರ. ದೇವತೆಗಳು, ದಾನವರು ಆಳುವ ಕ್ಷೇತ್ರಕ್ಕೆ ಅವನಿಗೆ ಮುಕ್ತ ಪ್ರವೇಶ. 'ನಾರಾಯಣ ಸ್ಮರಣೆ' ಬದುಕಿನ ಮಂತ್ರ. ಲೋಕದ ಹಿತಾಕಾಂಕ್ಷಿ. ಒಳಿತನ್ನು ಬಯಸುವ ಸಮ್ಮನಸ್ಸಿಗ. ಅಧರ್ಮವನ್ನು ಎತ್ತಿ ತೋರಿಸುವ, ಅಲ್ಲಿ ಧರ್ಮ ಸ್ಥಾಪನೆಗಾಗಿ ಯುಕ್ತಿಯನ್ನು ಹೆಣೆಯುವ ಬುದ್ಧಿಮತ್ತೆ ಹೊಂದಿದಾತ. 'ನಾರದನು ದೇವತೆಗಳ ಸಂದೇಶವಾಹಕ, ಸಂವಹನಕಾರ, ಆತ ವಿಶ್ವದ ಮೊದಲ ಪತ್ರಕರ್ತ!', ಹಿಂದೊಮ್ಮೆ ನಾರದ ಜಯಂತಿ ಸಂದರ್ಭದಲ್ಲಿ ಮಿಂಚಿದ ಮಾತಿದು.

ಪತ್ರಕರ್ತರೂ ನಿತ್ಯ ಸಂಚಾರಿಗಳು. ಕಾಲಿಗೆ ಚಕ್ರ ಕಟ್ಟಿಕೊಂಡು ಓಡಾಡುತ್ತಾ ಇರುವುದು ವೃತ್ತಿ ಕಾಯಕ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ಕಾವಲುಗಾರರು. ಲೋಕದ ವಿದ್ಯಮಾನಗಳಿಗೆ ಅವರದು ತೆರೆದ ನಯನ. ಪಕ್ಷಾತೀತವಾಗಿರಬೇಕು. ವ್ಯಕ್ತಿನಿಷ್ಠತೆಯನ್ನು ಹೊಂದಿರಬಾರದು. ತಪ್ಪನ್ನು ಎತ್ತಿ ತೋರಿಸುವ, ಒಳಿತನ್ನು ಶ್ಲಾಘಿಸುವ ಮನಃಸ್ಥಿತಿಯಿರಬೇಕು. ಸಮಾಜದೊಳಗಿನ ಉತ್ತಮ ವಿಚಾರಗಳಿಗೆ ಕನ್ನಡಿಯಾಗಬೇಕು. ವರದಿಗಳು, ಲೇಖನಗಳು ಸಮಾಜದ ಹಿತಕ್ಕೆ ಪೂರಕವಾಗಿರಬೇಕು. ಆದರೆ ವರ್ತಮಾನದ ಬದುಕಿನಲ್ಲಿ 'ನಾರದ'ನ ಸ್ಥಾನ-ಮಾನವನ್ನು ನಂನಮ್ಮ ವ್ಯಕ್ತಿತ್ವ ಮತ್ತು ಬೌದ್ಧಿಕ ಪಕ್ವತೆ (ಅಪಕ್ವತೆ) ಅನುಸಾರ ಹಿಂಜಿದ್ದೇವೆ. ನಾರದನೆಂದರೆ 'ನೆಗೆಟಿವ್' ಭಾವ ಬರುವಂತೆ ಚಿತ್ರಿಸಿದ್ದೇವೆ. ಕೆಲವೊಂದು ವ್ಯಕ್ತಿಗಳ ವ್ಯಕ್ತಿತ್ವಕ್ಕೆ 'ನಾರದ'ನನ್ನು ಹೊಸೆಯುತ್ತೇವೆ. ಅಂದು ನಾರದನ ಕೆಲಸ ಏನಿತ್ತೋ ಅದರಲ್ಲಿತ್ತು, ಲೋಕ ಕ್ಷೇಮ. ನಾವು ಗ್ರಹಿಸುವ ನಾರದನ ಚಿತ್ರಣ ನಮ್ಮ ವಿಕಾರ ಮನಸ್ಸಿನ ಸಾಕಾರ!

'ಪತ್ರಕರ್ತ ಹೇಗಿರಬೇಕು ಎಂದರೆ ನಾರದನಂತಿರಬೇಕು' - ಬಹುಶಃ ಈ ಕಾಲಘಟ್ಟದ ಗ್ರಹಿಕೆ ಬದಲಾಗಬಹುದೇನೋ. ನಾರದನ ತಿರುಗಾಟದಲ್ಲಿ ಉದ್ದೇಶವಿತ್ತು. ಸದುದ್ದೇಶದ ಜತೆಗೆ ದುರುದ್ದೇಶವೂ ಇತ್ತು. ಯಾವುದು ದುರುದ್ದೇಶ? ಪರಸ್ಪರ 'ಕಿವಿಕಚ್ಚಿ' ದ್ವೇಷವನ್ನು ಹೆಚ್ಚಿಸುವುದು. ಪರಿಣಾಮ, ಧರ್ಮಕ್ಕೆ ಜಯ. ಅಧರ್ಮದ ನಾಶ. ಆದರೆ ಈಗ? ಧರ್ಮ, ಅಧರ್ಮದ ಪ್ರಶ್ನೆಯಿಲ್ಲ. ಕಿವಿಕಚ್ಚುವುದು ಅರ್ಹತೆ!

ಬೆರಳಿನ ತುದಿಯಲ್ಲಿ ಮಾಹಿತಿಗಳು ಗೂಡುಕಟ್ಟಿರುವಾಗ, ಒಂದು ಕ್ಲಿಕ್ಕಿನಲ್ಲಿ ಅಂಗೈಯಲ್ಲಿ ಪ್ರಪಂಚ ಕಾಣುತ್ತಿರುವಾಗ 'ಕ್ಷೇತ್ರ ಭೇಟಿ' ಯಾಕೆಂಬ ಪ್ರಶ್ನೆ? ಜಾಲತಾಣಗಳು ಮಾಹಿತಿಗಳನ್ನು ಸುರಿಯುತ್ತವೆ. ಅಲ್ಲಿಂದ ಬೇಕಾದುದನ್ನು, ಬೇಕಾದಷ್ಟು ಆಯ್ದುಕೊಳ್ಳಬಹುದು. ಸಮುದ್ರದಿಂದ ಒಂದು ಬೊಗಸೆ ನೀರನ್ನು 'ನಂನಮ್ಮ ಬೌದ್ಧಿಕ ಪಾತ್ರೆಗನುಸಾರ' ಹಿಡಿದಿಟ್ಟಂತೆ. ಆ ಮಾಹಿತಿಗಳನ್ನು ಜ್ಞಾನವನ್ನಾಗಿ ಪರಿವರ್ತಿಸಿ ಬರೆಯುವ ಬರಹಗಳು ಸತ್ವಪೂರ್ಣ.



ಒಳ್ಳೆಯ ಲೇಖಕ ಎಂದರೆ ಹೊಸ ವಿಷಯಗಳನ್ನು ಅರ್ಥವಾಗುವಂತೆಯೂ, ತಿಳಿದ ವಿಷಯವನ್ನು ಹೊಸದಾಗಿ ಹೇಳಬಲ್ಲವನು." ಡಾ.ಯಂಡಮೂರಿ ವೀರೇಂದ್ರನಾಥ ಅಭಿಮತ.

"ನಾರದನಂತೆ ಪತ್ರಕರ್ತರು ಸುದ್ದಿಯನ್ನು ಮಾತ್ರ ನೀಡಬೇಕು, ಅಭಿಪ್ರಾಯಗಳನ್ನಲ್ಲ. ನಾರದನು ದೇವತೆಗಳು ಹಾಗೂ ರಾಕ್ಷಸರ ಜತೆಗೆ ಮಾಹಿತಿ ಹಂಚಿಕೊಂಡರೂ ಮಾನವ ಜನಾಂಗಕ್ಕೆ ಒಳಿತಾಗುವಂತೆ ಮಾಡುತ್ತಿದರು." ಒಮ್ಮೆ ಸಚಿವರೊಬ್ಬರು ಸಮಯೋಚಿತವಾಗಿ ಹಂಚಿಕೊಂಡ ಮಾತುಗಳು ಅಕ್ಷರಶಃ ಸತ್ಯ. ಕೆಲವು ಪತ್ರಿಕಾಗೋಷ್ಠಿಗಳು ಸಲಹಾ ಸಮಿತಿಯ ಸಭೆಗಳಾಗಿ ಬದಲಾಗುತ್ತವೆ! ಉತ್ತರ ಬೇಕೋ, ಬೇಡವೋ ಪ್ರಶ್ನೆಗಳ ಸುರಿಮಳೆ! ತಾನು ಸುದ್ದಿ ನೀಡುವ ಪತ್ರಿಕಾ ಪ್ರತಿನಿಧಿಯೆನ್ನುವುದನ್ನು ಮರೆತಿರುತ್ತಾನೆ. ಗೋಷ್ಠಿಯಲ್ಲಿ ತನಗೆ ಅರ್ಥವಾಗದಿದ್ದ ವಿಚಾರಗಳನ್ನು ಸಂಘಟಕರಲ್ಲಿ ವಿನಂತಿಸಿ ಪರಿಹರಿಸಿಕೊಳ್ಳಬಹುದು. ತಂತಮ್ಮ ಅಭಿಪ್ರಾಯಗಳನ್ನು ಪತ್ರಿಕಾಗೋಷ್ಠಿಯಲ್ಲಿ ಹೇಳುವುದು ಯಾ ಹೇರುವುದು ಸೌಜನ್ಯವಲ್ಲ.

ನಾರದ ಜಗಳಗಂಟ! ಒಬ್ಬರ ವಿಷಯ ಇನ್ನೊಬ್ಬರಲ್ಲಿ ಆಡಿ ಮನಸ್ತಾಪವನ್ನು ಸೃಷ್ಟಿಸುವುದು. ಹೌದು, ಅಲ್ಲಿ 'ಧರ್ಮಕ್ಕೆ ಜಯ' ಒದಗಿಸುವ ಉದ್ದೇಶ. ಉದಾ: ದೇವರಾಜ ದೇವೇಂದ್ರನ ವಿಚಾರವನ್ನು ದಾನವರಲ್ಲಿ ಅರುಹುವುದು. ಇದರಿಂದ ಸ್ವರ್ಗಲೋಕಕ್ಕೆ ದಾನವರ ಲಗ್ಗೆ. ಯುದ್ಧದಲ್ಲಿ ದೇವೇಂದ್ರನ ಸೋಲು. ತ್ರಿಮೂರ್ತಿಗಳಲ್ಲೊಬ್ಬರಲ್ಲಿ ದೂರು. ಅವರಿಂದ ದಾನವರ ನಿಗ್ರಹ. ಲೋಕ ನೆಮ್ಮದಿ. ಈಗ ಹಾಗಲ್ಲವಲ್ಲಾ. ಇದು ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿ ದೇವತೆಗಳನ್ನು, ದಾನವರನ್ನು ಹುಡುಕಬೇಕಾಗಿಲ್ಲ. ಇಬ್ಬರೂ ನಮ್ಮೊಳಗಿದ್ದಾರೆ! ಅವರಿವರ ಸುದ್ದಿಗಳನ್ನು ಹೇಳುತ್ತಾ ದಿನ ಕಳೆಯುವ ಮಂದಿಗೆ ಹೊತ್ತು ಹೊತ್ತಿಗೆ ಹೊಟ್ಟೆ ತಂಪಾದರಾಯಿತು.

ಒಮ್ಮೆ ರಾಜಕೀಯ ಕ್ಷೇತ್ರದೊಳಗೆ ಇಣುಕಿ. ಪಕ್ಷ ಯಾವುದೇ ಇರಲಿ. ಹುದ್ದೆ, ಸ್ಥಾನಮಾನ ಏನೂ ಇಲ್ಲದೆ ಪಕ್ಷಗಳ ಹಿಂದೆ ಅಡ್ಡಾಡಿಕೊಂಡು, ಒದ್ದಾಡಿಕೊಂಡು, ಅವರಿವರ ಸುದ್ದಿಯನ್ನು ತಮಗೆ ಬೇಕಾದಂತೆ ತಿರುಚುವ ಮಂದಿಗಳ ಗಡಣ. ಇವರಿಗೆ ತಾವಾಡುವ ಮಾತು, ನಡೆದುಕೊಳ್ಳುವ ರೀತಿಯಿಂದಾಗುವ ಪರಿಣಾಮದ ಘೋರತೆಯು ಬೇಕಾಗಿಲ್ಲ. ಇಂತಹ 'ನಾರದ'ರ ಅವಶ್ಯಕತೆ ನಾಯಕನಿಗಿರುತ್ತದೆ. ಇದು ನಾಯಕರಿಗೆ ವರವೂ ಹೌದು, ಶಾಪವೂ ಹೌದು.

ಇಬ್ಬರು ಸ್ನೇಹಿತರನ್ನು ಪರಸ್ಪರ ಛೂ ಬಿಟ್ಟು ಖುಷಿಯನ್ನು ಅನುಭವಿಸುವ, ಕುಟುಂಬದೊಳಗೆ ಹುಳಿಯನ್ನು ಹಿಂಡುವ, ಬಾಂಧವ್ಯಗಳನ್ನು ಹಾಳು ಮಾಡುವ, ಬಡವ-ಬಲ್ಲಿದನೆಂಬ ಕಂದಕವನ್ನು ಸೃಷ್ಟಿಸುವವರ ವ್ಯಕ್ತಿತ್ವಗಳನ್ನು ಗ್ರಹಿಸಿದರೆ ಅಂದು ಅಧರ್ಮದ ನಾಶಕ್ಕೆ ಮುಂದಾದ ನಾರದರು ಎಲ್ಲಿ? ನಾವೆಲ್ಲಿ? ಹೋಲಿಕೆ ಅಸಾಧ್ಯ.

**ಸಂಪೂರ್ಣ ಓದಿಗೆ....**
**www.theruralmirror.com ಕ್ಲಿಕ್ ಮಾಡಿರಿ ಅಥವಾ ಇಲ್ಲಿ Scan ಮಾಡಿರಿ**

ನಮ್ಮ ಚಾನೆಲ್ ಫಾಲೋ ಮಾಡಲು